**ಡೇರಿ ಫಾರ್ಮರ್ಸ್ ವೇಲ್ ಫೇರ್ ಟ್ರಸ್ಟ್, ದ. ಕ ಹಾಲು ಒಕ್ಕೂಟ,**
**ಕುಲಶೇಖರ, ಮಂಗಳೂರು – 575 005.**

ನಂ:ದಕಹಾಒ:ಡೇ.ರೈ.ಕ.ಟ್ರ.: :2017-18ದಿನಾಂಕ: 08-01-2018

:: **ಸುತ್ತೋಲೆ** ::

**ವಿಷಯ:** ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಪರಿಹಾರಧನ ಪಡೆಯಲು ಬದಲಾವಣೆಗೊಂಡಿರುವ ಹೊಸ ಅರ್ಜಿ ನಮೂನೆ ಕುರಿತು.

**ಉಲ್ಲೇಖ:** ದಿನಾಂಕ 26-12-2017 ರಂದು ನಡೆದ ಟ್ರಸ್ಟ್ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ.

*******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಪರಿಹಾರಧನ ಪಡೆದುಕೊಳ್ಳಲು ಈ ಹಿಂದೆ ಇದ್ದ ಅರ್ಜಿಯಲ್ಲಿ ಕೆಲವು ಬದಲಾವಣೆ ಮಾಡಲಾಗಿದ್ದು, ಹೊಸ ಅರ್ಜಿ ಫಾರಂನ್ನು ಇದರೊಂದಿಗೆ ಲಗತ್ತಿಸಲಾಗಿದ್ದು, ಈ ಹೊಸ ನಮೂನೆಯ ಅರ್ಜಿಯು ದಿನಾಂಕ 11-01-2018 ರಿಂದ ಅನ್ವಯವಾಗುತ್ತದೆ. ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಪರಿಹಾರಧನ ಪಡೆಯಲು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಡಲು ತಿಳಿಸಲಾಗಿದೆ.

1. ಉತ್ತಮ ಗುಣಮಟ್ಟದ ಛಾಯಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು.
2. ಸಂಘದ ಕಾರ್ಯಕಾರಿ ಮಂಡಳಿಯ ನಡವಳಿ ಮತ್ತು ಶಿಫಾರಸ್ಸು ಪತ್ರ ಕಡ್ಡಾಯವಾಗಿ ಲಗತ್ತಿಸುವುದು.
3. ಘಟನೆ ಸಂಭವಿಸಿದ 3 ತಿಂಗಳ ಒಳಗಾಗಿ ಪರಿಹಾರ ಪಡೆದು ಕೊಳ್ಳಲು ಅರ್ಜಿಯನ್ನು ಸಲ್ಲಿಸುವುದು. ನಂತರ ಬಂದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಳಂಭವಾಗಿದ್ದಲ್ಲಿ ಸೂಕ್ತ ಕಾರಣದೊಂದಿಗೆ ಅರ್ಜಿ ಸಲ್ಲಿಸುವುದು.
4. ಸಂಘಕ್ಕೆ ಸಂಬಂಧಪಟ್ಟ ವಿಸ್ತರಣಾಧಿಕಾರಿ, ಪಶು ವೈದ್ಯಾಧಿಕಾರಿ ಮತ್ತು ಉಪವ್ಯವಸ್ಥಾಪಕರ ಶಿಫಾರಸ್ಸಿನೊಂದಿಗೆ ಅರ್ಜಿಯನ್ನು ಪೂರ್ತಿಯಾಗಿ ಭರ್ತಿ ಮಾಡಿ ಕಚೇರಿಗೆ ಸಲ್ಲಿಸುವುದು.
5. ಸದಸ್ಯರು ಆನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದಲ್ಲಿ ಕಡ್ಡಾಯವಾಗಿ ಆಸ್ಪತ್ರೆಯDischarge Summary ಮತ್ತು ಆಸ್ಪತ್ರೆಯ ಬಿಲ್ಲಿನ ಮೂಲ ಪ್ರತಿಗಳನ್ನು ಲಗತ್ತಿಸುವುದು. ಮೂಲ ಪ್ರತಿಗಳು ಇಲ್ಲವಾದಲ್ಲಿ ಸೂಕ್ತ ಕಾರಣದೊಂದಿಗೆ ನಕಲು ಪ್ರತಿಗಳನ್ನು ನೀಡುವುದು.
6. ಸದಸ್ಯರ ರಾಸು ಮೃತಪಟ್ಟಲ್ಲಿ ಅರ್ಜಿ ಸಲ್ಲಿಸುವಾಗ ಒಕ್ಕೂಟದ ಪಶುವೈದ್ಯರಿಂದ ದನದ ಮರಣೋತ್ತರ ವರದಿಯನ್ನು ತಪ್ಪದೇ ಲಗತ್ತಿಸುವುದು.
7. ಅರ್ಜಿಯಲ್ಲಿರುವ ಎಲ್ಲಾ ಕಾಲಂಗಳನ್ನು ತಪ್ಪದೇ ತುಂಬಿಸುವುದು, ಇಲ್ಲವಾದಲ್ಲಿ ಅರ್ಜಿಯನ್ನು ಅಪೂರ್ಣವೆಂದು ಪರಿಗಣಿಸಿ ತಿರಸ್ಕರಿಸಲಾಗುವುದು.
8. ಸದಸ್ಯರ ರಾಸುವು ಮರಣ ಹೊಂದಿದ್ದಲ್ಲಿ, ರಾಸುವು ಮರಣ ಹೊಂದಿದ ನಂತರ ಸದಸ್ಯನು ಸಂಘಕ್ಕೆ ಪೂರೈಸುತ್ತಿರುವ ಹಾಲಿನ ಪ್ರಮಾಣವನ್ನು ಮಾತ್ರ ಸಂಘಕ್ಕೆ ಪ್ರಸ್ತುತ ಪೂರೈಸುತ್ತಿರುವ ಹಾಲಿನ ಪ್ರಮಾಣ ಲೀಟರ್‌ಗಳಲ್ಲಿ ಕಾಲಂನಲ್ಲಿ ತುಂಬಿಸಬೇಕು.
9. ಸದಸ್ಯರು ಸಂಘದಲ್ಲಿ ಸದಸ್ಯತ್ವ ಪಡೆದ ದಿನಾಂಕ ಮತ್ತು ಎಷ್ಟು ವರ್ಷದಿಂದ ಸಂಘಕ್ಕೆ ಹಾಲು ಪೂರೈಸುತ್ತಿದ್ದಾರೆ ಎಂಬ ಮಾಹಿತಿಯನ್ನು ತಪ್ಪದೇ ಅರ್ಜಿಯಲ್ಲಿ ತುಂಬಿಸಬೇಕು. ಹಾಗೂ ಸದಸ್ಯನು ಸಂಘದಲ್ಲಿ ಸದಸ್ಯತ್ವ ಪಡೆಯುವ ಮೊದಲು ಅಸದಸ್ಯನಾಗಿ ಹಾಲು ಪೂರೈಸಿದ್ದಲ್ಲಿ ಅಂತಹ ಮಾಹಿತಿಯನ್ನು ಕೂಡ ಅರ್ಜಿಯಲ್ಲಿ ತುಂಬಿಸುವುದು.
10. ಸಂಘದವರು ಸದಸ್ಯರು ನೀಡಿದ ಅರ್ಜಿಯನ್ನು ಸಂಬಂಧಪಟ್ಟ ವಿಸ್ತಾರಣಾಧಿಕಾರಿಯವರ ಮುಂಖಾತರ ಕಚೇರಿಗೆ ನೀಡುವುದು.

**ಡೇರಿ ರೈತರ ಕಲ್ಯಾಣ ಟ್ರಸ್ಟ್ ಪರವಾಗಿ,**

**ಮುಖ್ಯ ಕಾರ್ಯನಿರ್ವಹಣಾಧಿಕಾರಿ.**

**ರಿಗೆ,**

**ಅಧ್ಯಕ್ಷರು / ಕಾರ್ಯದರ್ಶಿ**

. . . . . . . . ಹಾಲು ಉತ್ಪಾದಕರ ಸಹಕಾರಿ ಸಂಘ.

. . . . . . . . ತಾಲೂಕು.

**ಪ್ರತಿ :**

1. ಒಕ್ಕೂಟದ ಎಲ್ಲಾ ಗೌರವನ್ವಿತ ನಿರ್ದೇಶಕರುಗಳಿಗೆ.
2. ವ್ಯವಸ್ಥಾಪಕರು (ಶೇ.ಮತ್ತುತಾಂ.).
3. ಉಪವ್ಯವಸ್ಥಾಪಕರು(ಶೇ.) – ಮಂಗಳೂರು, ಪುತ್ತೂರು, ಮಣಿಪಾಲ, ಕುಂದಾಪುರ.
4. ಎಲ್ಲಾ ಪಶುವೈದ್ಯಾಧಿಕಾರಿಗಳು/ಸಹಾಯಕ ವ್ಯವಸ್ಥಾಪಕರು (ಶೇ.)
5. ಎಲ್ಲಾ ವಿಸ್ತರಣಾಧಿಕಾರಿಗಿಗಳಿಗೆ.
6. ಕಛೇರಿ ಪ್ರತಿ.

**ಮಾನ್ಯ ಗೌರವಾನ್ವಿತ ಅಧ್ಯಕ್ಷರು – ಇವರ ಕೃಪಾ ಅವಗಾಹನೆಗೆ ಸಲ್ಲಿಸಲಾಗಿದೆ.**